# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1084/2020

ಸಾಕ್ಷಿದಾರರ ಹೆಸರು : ಮಹೇಂದ್ರಕುಮಾರ್ ಕೆ ಹೆಚ್ ಪಿಡಬ್ಲ್ಯು:03
ತಂದೆ / ಗಂಡನ ಹೆಸರು : ಕೆ ಬಿ ಹೋಳಿಯಪ್ಪ ಸಿಡಬ್ಲ್ಯು:01
ವಯಸ್ಸು : 40 ವರ್ಷ
ಉದ್ಯೋಗ : ಪಿ ಐ
ವಾಸಸ್ಥಳ : ಬೆಂಗಳೂರು ಪ್ರ.ವ.ಬೋ ದಿ. :08.01.2024

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನಾನು ಡಿಸೆಂಬರ್ 2014 ರಿಂದ ಜುಲೈ 2015 ರವರೆಗೆ ಡಿ ಸಿ ಐ ಬಿ ಘಟಕ, ಜಿಲ್ಲಾ ಪೋಲಿಸ್ ಕಚೇರಿ, ಚಿತ್ರದುರ್ಗದಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 25.02.2015 ರಂದು ಮಧ್ಯಾಹ್ನ 3.45 ಪಿ ಎಂ ಗಂಟೆಗೆ ಮಾನ್ಯ ಚಿತ್ರದುರ್ಗ ಜಿಲ್ಲಾ ಪೋಲೀಸ್ ಅಧೀಕ್ಷಕರರವರು ನನಗೆ ದೂರವಾಣಿ ಮೂಲಕ ತಿಳಿಸಿದ್ದೇನೆಂದರೆ ಹೊಳಲ್ಕೆರೆ ತಾಲ್ಲೂಕು, ಆರ್ ಗೊಲ್ಲರಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಪೆಟ್ಟಿಗೆ ಅಂಗಡಿಯ ಹತ್ತಿರ ಯಾರೋ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿದ್ದು, ಆ ಬಗ್ಗೆ ದಾಳಿ ಮಾಡಿ ಕ್ರಮ ಜರುಗಿಸಿ ವರದಿ ಮಾಡುವಂತೆ ಸೂಚಿಸಿದ್ದರ ಮೇರೆಗೆ ನಾನು, ನಮ್ಮ ಸಿಬ್ಬಂದಿಯವರಾದ ಚಾ.ಸಾಃ 4 ರಿಂದ 6 ರವರುಗಳೆಲ್ಲರೂ ಸೇರಿ ನಮ್ಮ ಇಲಾಖಾ ಜೀಪಿನಲ್ಲಿ ಸಂಜೆ 4.00 ಗಂಟೆಗೆ ಚಿತ್ರದುರ್ಗವನ್ನು ಬಿಟ್ಟು 5.00 ಗಂಟೆಗೆ ಹೊಳಲ್ಕೆರೆಗೆ ಬಂದು ಇಬ್ಬರು ಪಂಚರನ್ನು ಬರುಮಾಡಿಕೊಂಡು ಅವರಿಗೆ ಸದರಿ ವಿಚಾರವನ್ನು ತಿಳಿಸಿ, ದಾಳಿ ಸಮಯದಲ್ಲಿ ಸಹಕರಿಸಲು ಕೋರಿಕೊಂಡಿದರ ಮೇರೆಗೆ ಸದರಿಯವರು ಒಪ್ಪಿದ್ದು, ನಂತರ ನಾವೆಲ್ಲರೂ ಸಂಜೆ 5.30 ಗಂಟೆಗೆ ಹೊಳಲ್ಕೆರೆಯನ್ನು ಬಿಟ್ಟು 6.15 ಗಂಟೆಗೆ ಆರ್ ಗೊಲ್ಲರಹಳ್ಳಿ ಗ್ರಾಮಕ್ಕೆ ಹೋಗಿ ದೂರದಲ್ಲಿ ಜೀಪನ್ನು ನಿಲ್ಲಿಸಿ ಸ್ಥಳಕ್ಕೆ ಹೋಗಿ ನೋಡಲಾಗಿ ಯಾರೋ ಇಬ್ಬರು ಆಸಾಮಿಗಳು ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ನಾನು ಸಿಬ್ಬಂದಿಯವರೊಂದಿಗೆ ದಾಳಿಗೆ ಮುಂದಾದಾಗ ಸಾರ್ವಜನಿಕರು ಮತ್ತು ಒಬ್ಬ ಆಸಾಮಿಯು ಓಡಿ ಹೋಗಿದ್ದು, ಮತ್ತೊಂಬ್ಬ ಆಸಾಮಿಯು ಸಿಕ್ಕಿದ್ದು, ಆತನನ್ನು ವಿಚಾರಿಸಿದಾಗ ಆತ ತನ್ನ ಹೆಸರು ಜಿ ಆರ್ ಚಿಕ್ಕಣ್ಣ ಎಂದು ತಿಳಿಸಿದ್ದು ಓಡಿ ಹೋದ ಆಸಾಮಿಯ ಹೆಸರು ಮಂಜುನಾಥ ಅಲಿಯಾಸ್ ಮಂಜಪ್ಪ

ತಂದೆ ನಾಗರಾಜಪ್ಪ ಎಂದು ತಿಳಿಸಿದ್ದು, ಸದರಿ ಆಸಾಮಿಯನ್ನು ಮದ್ಯ ಮಾರಾಟ ಮಾಡಲು ಸರ್ಕಾರದ ಪರವಾನಿಗೆ ಇದಿಯಾ ಎಂದು ಕೇಳಲಾಗಿ ಆತ ಇಲ್ಲ ಎಂದು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಸ್ಥಳದಲ್ಲಿ ದಾಸ್ತಾನು ಮಾಡಿದ್ದ ಮದ್ಯವನ್ನು ಪರಿಶೀಲಿಸಲಾಗಿ 180 ಎಂ ಎಲ್ ನ 106 ಓಲ್ಡ್ ಟವರಿನ ವಿಸ್ಕಿ ಪೌಚುಗಳು, 90 ಎಂ ಎಲ್ ನ 96 ರಾಜಾ ವಿಸ್ಕಿ ಪೌಚು, 180 ಎಂ ಎಲ್ ನ 17 ರಾಜಾ ವಿಸ್ಕಿ ಪೌಚುಗಳು, 330 ಎಂ ಎಲ್ 19 ನಾಕ್ ಔಟ್ ಬಾಟಲಿಗಳು ಇದ್ದು ಅವುಗಳ ಅಂದಾಜು ಬೆಲೆ ಒಟ್ಟು 10 ಸಾವಿರದ 100 ರೂಪಾಯಿ ಎಂದು ಅಂದಾಜಿಸಿದ್ದು, ನಂತರ ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡು ಸಂಜೆ 7.00 ರಿಂದ 8.00 ಗಂಟೆಯವೆರೆಗೆ ಪಂಚನಾಮೆ ಕ್ರಮವನ್ನು ಜರುಗಿಸಿದ್ದು, ನಂತರ ಸದರಿ ಪಂಚನಾಮೆಯನ್ನು, ವಶಕ್ಕೆ ಪಡೆದ ಒಂದನೇ ಆರೋಪಿ ಮತ್ತು ಮುದ್ದೆ ಮಾಲು ಗಳೊಂದಿಗೆ ರಾತ್ರಿ 8.30 ಗಂಟೆಗೆ ಹೊಳಲ್ಕೆರೆ ಪೋಲೀಸ್ ಠಾಣೆಗೆ ಬಂದು ಮುಂದಿನ ಕಾನೂನು ಕ್ರಮವನ್ನು ಜರುಗಿಸಲು ಠಾಣಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಃ 1 ರಿಂದ 4 ಅನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಪರ ವಕೀಲರು ಗೈರು ಹಾಜರಾತಿ ವಿನಾಯಿತಿ ಅರ್ಜಿ ಸಲ್ಲಿಸಿದ ಮೇರೆಗೆ 1 ನೇ ಆರೋಪಿಯನ್ನು ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಯಿತು (ಈ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ)

ಈ ಹಂತದಲ್ಲಿ ಸಾಕ್ಷಿಗೆ ನಿಪಿಃ 1 ರ ದಾಖಲೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವರ ಸಹಿಯನ್ನು ನಿಪಿಃ 1 (ಸಿ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ದೂರನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿಃ3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 3 (ಸಿ) ಎಂದು ಗುರುತಿಸಲಾಯಿತು.

**ಪಾಟೀಸವಾಲು : ಆರೋಪಿತರ ಪರ ಶ್ರೀ ಪಿ.ಎಲ್.ಎಂ. ವಕೀಲರಿಂದ**

ದಾಳಿಗೆ ನಾನು, ನಮ್ಮ ಸಿಬ್ಬಂದಿ ಮತ್ತು ಇಬ್ಬರು ಪಂಚರು ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಸುಮಾರು ಸಂಜೆ 6.15 ಗಂಟೆಯಾಗಿತ್ತು. ನಾವು ಹೋದಾಗ ಸಂಜೆಗತ್ತಲಾಗಿತ್ತು. ನಾವು ನಮ್ಮ ಇಲಾಖಾ ಜೀಪನ್ನು ಸುಮಾರು 200 ಮೀಟರ್ ದೂರದಲ್ಲಿ ನಿಲ್ಲಿಸಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಸಾಕಷ್ಟು ಜನರಿದ್ದು, ಎಷ್ಟು ಜನ ಅಂತ ಹೇಳಲು ಆಗುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಕೆಲವೊಂದು ಜನ ಮದ್ಯ ಸೇವನೆ ಮಾಡುತ್ತಿದ್ದರು. ನಾನು ದಾಳಿ ಮಾಡಿದಾಗ ಅವರ ಓಡಿ ಹೋಗಿದ್ದರಿಂದ ಅವರನ್ನು ವಿಚಾರಿಸಿರುವುದಿಲ್ಲ. ನಾವು ದಾಳಿ ಮಾಡಿದಾಗ ಕತ್ತಲೆಯಾಗಿದ್ದರಿಂದ ಮದ್ಯವನ್ನು ಯಾರು

ಮಾರಾಟ ಮಾಡುತ್ತಿದ್ದರು ಎಂದು ನಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಪೆಟ್ಟಿ ಅಂಗಡಿಯ ಮುಂದೆ ಬೀದಿ ದೀಪ ಇದ್ದುದರಿಂದ ನಮಗೆ ಮದ್ಯ ಮಾರಾಟ ಮಾಡುತ್ತಿದ್ದವರು ಕಾಣಿಸಿದ್ದರು ಎಂದು ನುಡಿಯುತ್ತಾರೆ. ದಾಳಿ ಕಾಲದಲ್ಲಿ ನಾವು 180 ಎಂ ಎಲ್ ನ 106 ಓಲ್ಡ್ ಟವರಿನ ವಿಸ್ಕಿ ಪೌಚುಗಳು, 90 ಎಂ ಎಲ್ ನ 96 ರಾಜಾ ವಿಸ್ಕಿ ಪೌಚು, 180 ಎಂ ಎಲ್ ನ 17 ರಾಜಾ ವಿಸ್ಕಿ ಪೌಚುಗಳು, 330 ಎಂ ಎಲ್ 19 ನಾಕ್ ಔಟ್ ಬಾಟಲಿಗಳನ್ನು ವಶಪಡಿಸಿಕೊಂಡಿರುತ್ತೇವೆ. ಇವುಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಒಂದು ವೇಳೆ ದಾಳಿ ಮಾಡಿದಾಗ ಅಲ್ಲಿ ಸಾರ್ವಜನಿಕರು ಮದ್ಯ ಸೇವನೆ ಮಾಡುತ್ತಿದ್ದಲ್ಲಿ ಅಲ್ಲಿ ಜಗ್, ಲೋಟ ಮತ್ತು ನೀರಿನ ಲೋಟಗಳು ಸಿಗುತ್ತಿದ್ದವು ಎಂದರೆ ಸಾಕ್ಷಿಯು ಆ ರೀತಿಯ ಯಾವುದೇ ವಸ್ತುಗಳು ನಮಗೆ ಅಲ್ಲಿ  ಕಂಡುಬರುವುದಿಲ್ಲ ಎಂದು ನುಡಿಯುತ್ತಾರೆ. ಒಂದು ವೇಳೆ ಮದ್ಯವನ್ನು ಅಲ್ಲಿ ಮಾರಾಟ ಮಾಡುತ್ತಿದ್ದರೆ ಮದ್ಯ ಮಾರಾಟದಿಂದ ಬಂದ ಹಣವನ್ನೇನಾದರೂ ವಶಪಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ತಪ್ಪಿಸಿಕೊಂಡು ಹೋದ ಇನ್ನೊಬ್ಬ ಆಸಾಮಿಯು ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆಂದು ಒಂದನೇ ಆರೋಪಿಯು ನಮಗೆ ತಿಳಿಸಿರುತ್ತಾನೆ. ಮಹಜರ್ ಮಾಡಿದ ಸ್ಥಳದ ಚೆಕ್ಕುಬಂದಿ ನನಗೆ ಈಗ ನೆನಪಿರುವುದಿಲ್ಲ. ಮುದ್ದೆ ಮಾಲುಃ1 ರಿಂದ 4 ರ ರೀತಿಯ ಬಾಟಲಿಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸಾಕ್ಷಿಯು ಸಿಗಬಹುದು ಎಂದು ನುಡಿಯುತ್ತಾರೆ. ಇಲಾಖಾ ಅಂಕಿ ಅಂಶಗಳಿಗೋಸ್ಕರ ಮುದ್ದೆ ಮಾಲುಃ 1 ರಿಂದ 4 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲುಃ 1 ರಿಂದ 4 ಕ್ಕೆ ನಾವು ಮತ್ತು ಪಂಚರು ಸಹಿ ಮಾಡಿರುತ್ತೇವೆ. ನಾನು ಆ ದಿನ ಯಾವುದೇ ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ವ್ಯವಸಾಯಗಾರರಾಗಿದ್ದು, ಅವರಿಗೆ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ದಾಳಿಗೆ ಪಂಚರನ್ನು ನಮ್ಮ ಸಿಬ್ಬಂದಿಯವರು ಕರೆದುಕೊಂಡು ಬಂದಿದ್ದು, ಯಾರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿಃ 1 ನ್ನು ಚಾ.ಸಾಃ  6 ರವರು ಬರೆದಿರುತ್ತಾರೆ. ನಾವು ದಾಳಿಗೆ ಹೋಗಿದ್ದೇ ಆದಲ್ಲಿ ಚೆಕ್ಕುಬಂದಿ ನನಗೆ ನಿಖರವಾಗಿ ಗೊತ್ತಿರುತ್ತಿತ್ತು. ನಾನು ದಾಳಿಗೆ ಹೋಗದೇ ಇದ್ದುದರಿಂದ ಚೆಕ್ಕುಬಂದಿ ನೆನಪಿಲ್ಲ ಎಂದು  ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೂ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಇಲಾಖಾ ಅಂಕಿ ಅಂಶಗಳಿಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿ  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ